

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ರಿ), ಮೈಸೂರು

ಆಡಳಿತ ಕಾರ್ಯಾಲಯ, ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ, 1ನೇ ಮುಖ್ಯ ರಸ್ತೆ,
ಜಯನಗರ 8ನೇ ವಿಭಾಗ, ಬೆಂಗಳೂರು – 560 070

ಸಹಯೋಗ

ರಮಣಶ್ರೀ ಪ್ರತಿಷ್ಠಾನ, ಬೆಂಗಳೂರು

ನಂ. 16, ರಾಜಾ ರಾಮಮೋಹನ ರಾಯ್ ರಸ್ತೆ, ಬೆಂಗಳೂರು – 560 025

ಹತ್ತೊಂಬತ್ತನೆಯ ವರ್ಷದ

ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ–2024

ಹಾಗೂ

ಎಸ್. ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿಮುತ್ತು–ಭಾಗ 14'

ಪುಸ್ತಕ ಲೋಕಾರ್ಪಣೆ

ದಿನಾಂಕ: 18 ನವೆಂಬರ್ 2024, ಸೋಮವಾರ, ಬೆಳಿಗ್ಗೆ: 11.30 ರಿಂದ

ಸ್ಥಳ : ಹೊಟೇಲ್ ರಮಣಶ್ರೀ ರಿಚ್ಮಂಡ್
ನಂ. 16, ರಾಜಾ ರಾಮಮೋಹನ ರಾಯ್ ರಸ್ತೆ,
ರಿಚ್ಮಂಡ್ ಸರ್ಕಲ್, ಬೆಂಗಳೂರು – 560 025

ತಮಗೆ ಆದರದ ಆಮಂತ್ರಣ

ಎಸ್.ಷಡಕ್ಷರಿ
ಅಧ್ಯಕ್ಷರು
ರಮಣಶ್ರೀ ಪ್ರತಿಷ್ಠಾನ ಮತ್ತು ರಮಣಶ್ರೀ ಸಮೂಹ ಸಂಸ್ಥೆಗಳು

ಡಾ. ಸಿ. ಸೋಮಶೇಖರ, ಐ.ಎ.ಎಸ್. (ನಿ.)
ಅಧ್ಯಕ್ಷರು
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ಸಭಾ ಕಾರ್ಯಕ್ರಮ
ಬೆಳಿಗ್ಗೆ 11.30 ರಿಂದ

2024ರ 'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ ಸಮಾರಂಭ

ಉದ್ಘಾಟನೆ

ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ

ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಪ್ರಶಸ್ತಿ ಪ್ರದಾನ ಮತ್ತು ಅಧ್ಯಕ್ಷತೆ

ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ

ಮಾನ್ಯ ಮಾಜಿ ಮುಖ್ಯಮಂತ್ರಿಗಳು ಮತ್ತು ಲೋಕಸಭಾ ಸದಸ್ಯರು, ಹಾವೇರಿ

'ಕ್ಷಣ ಹೊತ್ತು ಆಣಿಮುತ್ತು ಭಾಗ 14' ಪುಸ್ತಕ ಲೋಕಾರ್ಪಣೆ

ಸನ್ಮಾನ್ಯ ಶ್ರೀ ವಿ.ಸೋಮಣ್ಣ

ಮಾನ್ಯ ಕೇಂದ್ರ ಜಲಶಕ್ತಿ ಮತ್ತು ರೈಲ್ವೇ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಗೌರವ ಉಪಸ್ಥಿತರು :

ಶ್ರೀ ಗೊ.ರು. ಚನ್ನಬಸಪ್ಪ, ಗೌರವ ಸಲಹೆಗಾರರು, ಅ.ಭಾ.ಶ.ಸಾ.ಪ

ಡಾ. ಮನು ಬಳಿಗಾರ್, ನಿಕಟಪೂರ್ವ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಶ್ರೀ ವಿಶ್ವೇಶ್ವರ ಭಟ್, ಪ್ರಧಾನ ಸಂಪಾದಕರು, ವಿಶ್ವವಾಣಿ

ಶ್ರೀ ರವಿ ಹೆಗಡೆ, ಪ್ರಧಾನ ಸಂಪಾದಕರು, ಕನ್ನಡ ಪ್ರಭ

ಎಸ್.ಷಡಕ್ಷರಿ
ಅಧ್ಯಕ್ಷರು
ರಮಣಶ್ರೀ ಪ್ರತಿಷ್ಠಾನ ಮತ್ತು ರಮಣಶ್ರೀ ಸಮೂಹ ಸಂಸ್ಥೆಗಳು

ಡಾ. ಸಿ. ಸೋಮಶೇಖರ, ಐ.ಎ.ಎಸ್. (ನಿ.)
ಅಧ್ಯಕ್ಷರು
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

2024ನೆಯ ಸಾಲಿನ ರಮಣಶ್ರೀ ಶರಣ ಪ್ರಶಸ್ತಿ ಪುರಸ್ಕೃತರು

ರಮಣಶ್ರೀ ಶರಣ ಜೀವಮಾನ ಸಾಧನೆ ಸನ್ಮಾನ
ಡಾ. ವೀರಣ್ಣ ರಾಜೂರ, ಧಾರವಾಡ

ರಮಣಶ್ರೀ ಶರಣ ಹಿರಿಯ ಶ್ರೇಣಿ ಪ್ರಶಸ್ತಿ ಪುರಸ್ಕೃತರು

ಸಾಧನೆಯ ಕ್ಷೇತ್ರ	ಪುರಸ್ಕೃತರು
ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆ	– ಶ್ರೀ ಎಚ್.ಎಸ್. ಸಿದ್ದಗಂಗಪ್ಪ, ಬೆಂಗಳೂರು
	– ಶ್ರೀ ಗುರುಲಿಂಗಪ್ಪ ಧಬಾಲೆ, ಅಕ್ಕಲ ಕೋಟೆ
ಆಧುನಿಕ ವಚನ ರಚನೆ	– ಶ್ರೀ ಪ್ರೊ. ಚಿದಾನಂದ ಪ. ಸಿದ್ಧಾಶ್ರಮ, ಮೈಸೂರು
	– ಶ್ರೀಮತಿ ಸುಶೀಲಾ ಸೋಮಶೇಖರ್, ಹಾಸನ
ವಚನ ಸಂಗೀತ	– ಶ್ರೀಮತಿ ಎಂ..ಎಸ್. ಶೀಲಾ, ಬೆಂಗಳೂರು
ಶರಣ ಸಂಸ್ಕೃತಿ ಪ್ರಸಾರ ಸೇವಾ ಸಂಸ್ಥೆ	– ಶ್ರೀ ಎಂ.ವಿ. ತ್ಯಾಗರಾಜ್, ಕರ್ನಾಟಕ ವಚನ ಸಾಹಿತ್ಯ ಪರಿಷತ್ತು (ರಿ), ಬೆಂಗಳೂರು

ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ ಪುರಸ್ಕೃತರು

ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆ	– ಡಾ. ಅಂದಯ್ಯ ಅರವಟಗಿಮಠ, ಗದಗ
ಆಧುನಿಕ ವಚನ ರಚನೆ	– ಡಾ. ಕಾತ್ಯಾಯಿನಿ ಕುಂಜಿಬೆಟ್ಟು, ಉಡುಪಿ
ವಚನ ಸಂಗೀತ	– ಡಾ. ರಂಜನಿ ವಾಸುಕಿ, ಬೆಂಗಳೂರು
	– ಶ್ರೀಮತಿ ವಡವಾಟಿ ಶಾರದಾ ಭರತ್, ರಾಯಚೂರು
ಶರಣ ಸಂಸ್ಕೃತಿ ಪ್ರಸಾರ ಸೇವಾ ಸಂಸ್ಥೆ	– ಶ್ರೀ ಓಂಶಿವಪ್ರಕಾಶ್ ಎಚ್.ಎಲ್., ಬೆಂಗಳೂರು

ರಮಣಶ್ರೀ ಶರಣ ವಿಶೇಷ ಪ್ರೋತ್ಸಾಹ ಪುರಸ್ಕಾರ
ಡಾ. ಸಂಗಮೇಶ್ ಉಪಾಸೆ, ಬೆಂಗಳೂರು

ತಮ್ಮ ಆಗಮನದ ನಿರೀಕ್ಷೆಯಲ್ಲಿ

ವೀರೇಂದ್ರ ಷಡಕ್ಷರಿ
ಟ್ರಸ್ಟಿ
ರಮಣಶ್ರೀ ಪ್ರತಿಷ್ಠಾನ

ಅರುಣಾ ಸತೀಶ್
ಅಧ್ಯಕ್ಷರು
ರಮಣಮಣಿ ಫೌಂಡೇಶನ್

ಸೋಮಶೇಖರ ಶಿ. ಗಾಂಜಿ
ಪ್ರಧಾನ ಕಾರ್ಯದರ್ಶಿ
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ರಮಣಶ್ರೀ ಶರಣ ಪ್ರಶಸ್ತಿಗಳು

ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದಂತಹ ಧಾರ್ಮಿಕ, ಸಾಮಾಜಿಕ ಆಂದೋಲನ ಇಡೀ ವಿಶ್ವದಲ್ಲಿಯೇ ಅತ್ಯಂತ ಐತಿಹಾಸಿಕವಾದುದು. ಬಸವಾದಿ ಶರಣರು ತಮ್ಮ ವಚನ ಸಾಹಿತ್ಯದ ಮೂಲಕ ವಿಶ್ವಭ್ರಾತೃತ್ವದ ಸಂದೇಶವನ್ನು ಹಾಗೂ ವಿಶಿಷ್ಟವಾದ ಮಾನವೀಯ ಮೌಲ್ಯಗಳ ವಿಚಾರಧಾರೆಯನ್ನು ಇಡೀ ವಿಶ್ವಕ್ಕೆ ನೀಡಿರುವುದು ಕನ್ನಡ ನಾಡಿನ ಹಿರಿಮೆಯಾಗಿದೆ. ಇಂತಹ ವಿಶಿಷ್ಟವಾದ ಶರಣ ಸಾಹಿತ್ಯವನ್ನು ವಿಶ್ವದಾದ್ಯಂತ ಪಸರಿಸಬೇಕೆಂಬ ಮಹತ್ವಾಂಕ್ಷೆಯಿಂದ ಪರಮಪೂಜ್ಯ ರಾಜಗುರುತಿಲಕ ಶ್ರೀ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಡಾ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1986ರಲ್ಲಿ ಸ್ಥಾಪಿಸಿದ ಒಂದು ಸಾಂಸ್ಕೃತಿಕ ಸಂಸ್ಥೆಯೇ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ರಾಜ್ಯ ಮತ್ತು ರಾಷ್ಟ್ರದಾದ್ಯಂತ ಶರಣ ಸಾಹಿತ್ಯ ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ಬಂದಿದೆ. ನಾಡಿನ ಹಲವಾರು ಹಿರಿಯ ಶರಣ ಸಂಸ್ಕೃತಿ ಪ್ರೇಮಿಗಳಾದ ಕೊಡುಗೈ ದಾನಿಗಳ ಸಹಾಯದಿಂದ ಶರಣ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮಹನೀಯರುಗಳನ್ನು ಗುರುತಿಸಿ, ಗೌರವಿಸಿ ಪ್ರಶಸ್ತಿ ನೀಡುವಂತಹ ಸಂಪ್ರದಾಯವನ್ನು ನಮ್ಮ ಪರಿಷತ್ತು ಕಳೆದ 38 ವರ್ಷಗಳಿಂದ ಮುಂದುವರಿಸಿಕೊಂಡು ಬಂದಿದೆ. ಇಂತಹ ಪ್ರತಿಷ್ಠಿತ ಪ್ರಶಸ್ತಿಯ ಸಾಲಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶ್ರೀ ಪ್ರತಿಷ್ಠಾನ ಜೊತೆಗೂಡಿ ಶರಣ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಶಿಷ್ಟ ಸಾಧನೆ ಮಾಡಿದವರ ಸಾಧಕರುಗಳಿಗೆ ರಮಣಶ್ರೀ ಶರಣ ಪ್ರಶಸ್ತಿ ಎಂಬ ಶೀರ್ಷಿಕೆ ಅಡಿಯಲ್ಲಿ ಕಳೆದ 18 ವರ್ಷಗಳಿಂದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತಾ ಬಂದಿರುವುದು ತುಂಬಾ ಹೆಮ್ಮೆಯ ವಿಷಯವಾಗಿದೆ.

ನಾಡಿನ ಉದ್ಯಮ, ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಉನ್ನತ ಸೇವೆ ಸಲ್ಲಿಸಿರುವ ಸಾಧಕರುಗಳಿಗೆ ರಮಣಶ್ರೀ ಪ್ರತಿಷ್ಠಾನ ಸಂಸ್ಥೆಯವರು ಪ್ರಾಯೋಜಿಸಿರುವ ಈ ಪ್ರಶಸ್ತಿಗಳನ್ನು ಶರಣ ಸಾಹಿತ್ಯ ಸಂಶೋಧನೆ, ಆಧುನಿಕ ವಚನ ರಚನೆ, ವಚನ ಸಂಗೀತ ಕ್ಷೇತ್ರಗಳಲ್ಲಿನ ಸಾಧಕರುಗಳಿಗೆ ಮತ್ತು ಶರಣ ಸಂಸ್ಕೃತಿ ಪ್ರಸಾರ ಸೇವಾ ಕ್ಷೇತ್ರಗಳಲ್ಲಿ ಗಮನಾರ್ಹ ಸೇವೆ ಸಲ್ಲಿಸುತ್ತಿರುವ ಒಂದು ಸಂಸ್ಥೆಗೆ ನಿರಂತರವಾಗಿ ನೀಡಲಾಗುತ್ತಿದೆ. ಶರಣ ಸಾಹಿತ್ಯ ಸಂಶೋಧನೆ, ಆಧುನಿಕ ವಚನ ರಚನೆ, ವಚನ ಸಂಗೀತ ಕ್ಷೇತ್ರದಲ್ಲಿನ ಮೂವರು ಸಾಧಕರುಗಳಿಗೆ ಹಿರಿಯ ಶ್ರೇಣಿಯಲ್ಲಿ ಹಾಗೂ ಶರಣ ಸಾಹಿತ್ಯ ಸಂಸ್ಕೃತಿ ಪ್ರಸಾರ ಸೇವಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಒಂದು ಸಂಸ್ಥೆಗೆ ತಲಾ ರೂ 40,000/-ಗಳನ್ನು ಅದೇ ರೀತಿ ಉತ್ತೇಜನ ಶ್ರೇಣಿಯಲ್ಲಿ ಶರಣ ಸಾಹಿತ್ಯ ಸಂಶೋಧನೆ, ಆಧುನಿಕ ವಚನ ರಚನೆ, ವಚನ ಸಂಗೀತ, ಕ್ಷೇತ್ರದಲ್ಲಿನ ಮೂವರು ಸಾಧಕರುಗಳಿಗೆ ಹಾಗೂ ಶರಣ ಸಾಹಿತ್ಯ ಸಂಸ್ಕೃತಿ ಪ್ರಸಾರ ಸೇವಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಒಂದು ಸಂಸ್ಥೆಗೆ ತಲಾ 20,000/-ರೂಗಳನ್ನು ನೀಡಿ ಗೌರವಿಸಲಾಗುತ್ತದೆ. ಶರಣ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಹಿರಿಯ ಸಾಧಕರೊಬ್ಬರಿಗೆ ಅವರ ಜೀವಮಾನ ಸಾಧನೆಗಾಗಿ 50,000/- ರೂಗಳನ್ನು ಒಳಗೊಂಡಂತೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಈ ವರ್ಷದ ಈ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಸಮಾರಂಭವು 2024ರ ನವೆಂಬರ್ 18ರಂದು ನಡೆಯಲಿದೆ. ಇಂತಹ ಪ್ರತಿಷ್ಠಿತ ಮೌಲಿಕ ಪ್ರಶಸ್ತಿಗಳನ್ನು ಪ್ರಾಯೋಜಿಸಿರುವ ರಮಣಶ್ರೀ ಪ್ರತಿಷ್ಠಾನದ ಅಧ್ಯಕ್ಷರು, ಸಾಹಿತಿಗಳಾದ ನಾಡೋಜ ಶ್ರೀ ಎಸ್. ಷಡಕ್ಷರಿ ಅವರಿಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅಭಿನಂದನಾ ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ದಿನಾಂಕ: 18.11.2024
ಬೆಂಗಳೂರು

ಡಾ. ಸಿ. ಸೋಮಶೇಖರ ಐ.ಎ.ಎಸ್(ನಿ)
ಅಧ್ಯಕ್ಷರು
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು